<u>**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**</u>

<u>ಸಿ.ಸಿ. ಸಂಖ್ಯೆ: **36/2022**</u>

ಹೆಸರುಃ ರೂಪ್ಲಿಬಾಯಿ ಸಿ.ಡಬ್ಲ್ಯೂ: 13

ವಯಸ್ಸುಃ 47 ವರ್ಷ ಪಿ.ಡಬ್ಲ್ಯೂ:1

ಗಂಡಃ ರಾಮನಾಯ್ಕ

ಉದ್ಯೋಗಃ ಪಿ ಎಸ್ ಐ

ವಾಸ ಸ್ಥಳ ಮಾಯಕೊಂಡ

ಸಾಕ್ಷಿಗೆ ದಿನಾಂಕಃ 13.07.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಸಅಅರವರಿಂದ ಮುಖ್ಯ ವಿಚಾರಣೆ</u>

2020 ಜನವರಿಯಿಂದ ಜೂನ್ 2022 ಇಲ್ಲಿಯವರೆಗೆ ನಾನ ಪಿ ಎಸ್ ಐ ಆಗಿ ಚನ್ನಗಿರಿ ಪೊಲೀಸ್ ಠಾಣೆ ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ ದಿಃ 22.09.2021 ರಂದು ಸಂಜೆ 4.00 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರುನ್ನು ಪಡೆದು ಠಾಣಾ ಗುನ್ನೆ ಸಂ. 348/2021 ಪ್ರಕರಣ ದಾಖಲಿಸಿರುತ್ತೇನೆ. ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದೂರನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಪ್ರ.ವ.ವರಯನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ, ಆ ಸಮಯಕ್ಕೆ ಚಾಸಾ 2 ಮತ್ತು 3 ರವರಿಗೆ ನೋಟಿಸ್ ನೀಡಿ ಹಾಜರುಪಡಿಸಿಕೊಂಡು ಅವರ ಸಮಕ್ಷಮ ಚಾಸಾ 1 ರವರು ತೋರಿಸಿದ ಅಪರಾದ ಸ್ಥಳದ ಮಹಜರ್ ನ್ನು ಸಂಜೆ 5.00 ರಿಂದ 6.00 ರವರೆಗೆ ಜರುಗಿಸಿರುತ್ತೇನೆ. ಸದರಿ ಮಹಜರ್ ನ್ನು ನಿಪಿ 3 ಎಂದು ಸಾಕ್ಷಿಯ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ಚಾಸಾ 8 ಮತ್ತು 9 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿಃ 24.10.2021 ರಂದು ಚಾಸಾ 12 ರವರು ನೀಡಿದ ಆರೋಪಿಯ ಸ್ವಇಚ್ಚಾ ಹೇಳಿಕೆ, ವರದಿ ಮತ್ತು ಮು. ಮಾಲುಗಳನ್ನು ಪಡೆದು ಮಾಲು ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ 6 ಮತ್ತು 7 ರವರ ಹೇಳಿಕೆ ಮತ್ತು ಚಾಸಾ 1, 8 ಮತ್ತು 9 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ. ಮಾಲು ಪಟ್ಟಿಯಲ್ಲಿನ 1 ರಿಂದ 3 ಮತ್ತು 5 ರ ಅನುಕ್ರಮ ಸಂಖ್ಯೆ ಯಲ್ಲಿ ತೋರಿಸಿದ ಮು. ಮಾಲುಗಳನ್ನು ಸಂಬಂದಿಸಿದ ವಸ್ತುಗಳು ಮಾಲೀಕರು ನ್ಯಾಯಾಲಯದ ಆದೇಶದ ಮೇರೆಗೆ

ತಮ್ಮ ವಶಕ್ಕೆ ಪಡೆದಿರುತ್ತಾರೆ. 4 ನೇ ಅನುಕ್ರಮ ಸಂ.ಯಲ್ಲಿ ತೋರಿಸಿದ ಹಣ ರೂ.2000/- ಸಿ ಆರ್ 311/2021 ಕ್ಕೆ ಸಂಬಂದಪಟ್ಟದಾಗಿದ್ದು ಅದನ್ನು ಈ ಪ್ರಕರಣದ ತನಿಖೆಯ ಕಾಲಕ್ಕೆ ವಶಪಡಿಸಿಕೊಳ್ಳಲಾಗಿರುತ್ತದೆ.

ದಿಃ 12.11.2021 ರಂದು ತನಿಖೆ ಪೂರೈಸಿ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಚಾಸಾ 12 ರವರು ಹಾಜರಪಡಿಸಿದ ಆರೋಪಿ ಈ ದಿನ ದೃಶ್ಯ ಸಮ್ಮೇಳದನದ ಮೂಲಕ ಹಾಜರಿರುವ ವ್ಯಕ್ತಿಯಾಗಿರುತ್ತಾನೆ.

ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ

ನಾನು ನಿಪಿ 3 ರಂತೆ ಪ್ರಶ್ನಿತ ಸ್ಥಳದಲ್ಲಿ ಮಹಜರ್ ನ್ನು ಜರುಗಿಸದೆ ಅದನ್ನು ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೆ ಸ್ವಇಚ್ಚಾ ಹೇಳಿಕೆಯನ್ನು ಕೊಡದೆ ಇದ್ದರು ಸಹ ನಾವೇ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರಶ್ನಿತ ಮು ಮಾಲುಗಳಿಗೂ, ಆರೋಪಿಗೂ ಹಾಗೂ ಪ್ರಕರಣಕ್ಕೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೆ ಅಪರಾದ ಮಾಡಿಲ್ಲ ಎಂದು ಕಂಡು ಬಂದಿದ್ದರು ಸಹ ಸುಳ್ಳು ತನಿಖೆ ಮಾಡಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ ಹೇ ಕೆ ಸರಿ ಇದೆ.**

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,
ಚನ್ನಗಿರಿ.